ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಕೇರಳಕ್ಕೆ ಹೋಗುತ್ತದೆ. ಉಗಾರ ನಕ್ಕರೆಯ ಕಾರ್ಖಾನೆಯಿಂದ ಅರಾಟ್ ಮಾಡತಕ್ಕದ್ದು ಆರ್ ಇಂಡಿಯಾ ಅರಾಟ್‌ಮೆಂಟ್.

Sri N. O. SAMAJI.—(*Marathi*)

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು; ಮಾರಬಹದು. ಜೋಳ 25 ಕಿಲೊ ಒಳಗೆ ತೆಗೆದುಕೊಂಡ ಮೇಲೆ ಅವರು ಹೊರಗಡೆ ಮಾರಬಹುದು.

Inadequate supply and distribution of food articles in rural areas of the State.

*Q.—322. Sri H. R. KESHAVA MURTHY (Gandasi).—

Will the Government be pleased to state :—

(*a*) whether they have received any complaints regarding inadequate supply and distribution of food articles in the rural areas of the State ;

(*b*) whether they are aware that the landless class and the labour classes are put to great hardship due to inadequate supply of food articles in rural areas ;

(*c*) the steps they propose to take to ensure equitable distribution of food supplies in the rural areas ?

A.— Sri M. V. KRISHNAPPA (Minister for Revenue).—

(*a*) Yes.

(*b*) Yes.

(*c*) It is more difficult to secure foodgrains in the urban areas and the areas having a concentration of labour population than in the rural areas. The urban areas and the areas having a concentration of labour population generally drawn upon the stocks in the rural areas. It is proposed to introduce informal rationing by stages in the larger towns and the areas having a concentration of labour population so as to ensure that the stocks available in the rural areas remain in these areas only to the extent possible. With these arrangements, it is hoped that the rural population will not find much difficulty in securing foodgrains.

ಶ್ರೀ ಎಚ್. ಆರ್. ಕೇಶವಮೂರ್ತಿ.—ಪಟ್ಟಣವಾಸಿಗಳಲ್ಲಿ ಇಂಡಸ್ಟ್ರೀಯಲ್ ಲೇಬರರುಗಳ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಅಗ್ರಿಕಲ್ಚರರ್ ಲೇಬರಿಗಿಂತ ಜಾಸ್ತಿ ಇದೆ. ವಾಟ್ ಐ ಮೆಂಟ್ ಈಸ್ ಅರ್ನಿಂಗ್ ಪರ್ ಡೇ. ಹೀಗಿದ್ದರೂ ಅಮೇರಿಕ ದೇಶದಿಂದ ತರಿಸಿದ ಗೋಧಿಯನ್ನು ಡಿಪ್ಪೋಗಳ ಮೂಲಕ 55 ರೂಪಾಯಿನ ರೇಟಿಗೆ ಇಂಡಸ್ಟ್ರಿಯಲ್ ಲೇಬರರಿಗೆ ಸಪ್ಲೈ ಮಾಡಿ, ಅಗ್ರಿಕಲ್ಚರ್ ಲೇಬರರ್ಸ್ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಬಹಳ ಕಡಿಮೆ ಇದ್ದರೂ ರಾಗಿ ಧಾರಣೆ 80 ರೂಪಾಯಿ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಕೂಲಿ ಬಡಜನರಿಗೆ ರಾಗಿ 80 ರೂಪಾಯಿ ಇರುವಾಗ, ಪಟ್ಟಣಗಳಲ್ಲಿರತಕ್ಕಂಥ ಇಂಡೆಸ್ಟ್ರಿಯಲ್ ಲೇಬರುಗಳಿಗೆ ಕೊಡುವ ರೀತಿಯಲ್ಲಿ ತಾವು ಗೋಧಿಯನ್ನು ಕೊಡಬೇಡವೇ ? ಅವರಿಗೆ ಪಡೆಯುವುದಕ್ಕೆ ಹಕ್ಕು ಇಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಳ್ಳಿಯವರಿಗೂ ಬಂದದ್ದರಲ್ಲಿ ಬಹಳಮಟ್ಟಿಗೆ ಕೊಡುತ್ತಾ ಇದ್ದೇವೆ. ಕಳೆದ ವರ್ಷ ಸೆಪ್ಟೆಂಬರ್, ಆಕ್ಟೋಬರ್‌ವರೆಗೂ ಬೆಂಗಳೂರಲ್ಲಿ ಬಂದ ಅಕ್ಕಿಯನ್ನು ಹಂಡಬೇನೆ ಇರಲಿಲ್ಲ.

ಗವರ್ನ್‌ಮೆಂಟ್‌ಆಫ್ ಇಂಡಿಯಾದವರು ಕೊಟ್ಟದ್ದನ್ನು ಹಳ್ಳಿಗಳಿಗೆ ಕೊಟ್ಟಿದ್ದೇವೆ. ಡಿಸ್ಟ್ರಿಕ್ಟ್ ಡಿ.ಸಿ.ಗಳಿಗೆ ಕೊಡುತ್ತೇವೆ, ಅವರು ತಾಲ್ಲೂಕುಗಳಿಗೆ ಅಲಾಟ್ ಮಾಡುತ್ತಾರೆ ; ತಾಲ್ಲೂಕು ಅಮಲ್ದಾರರು ಹಳ್ಳಿ ಸೊಸೈಟಿಗಳಿಗೆ ಅಲಾಟ್ ಮಾಡುತ್ತಾರೆ. ಸೆಪ್ಟೆಂಬರ್, ಅಕ್ಟೋಬರ್‌ವರೆಗೆ ಪೂರ್ತಿ ಹಳ್ಳಿಗಳಿಗೆ ಕೊಡುತ್ತಾ ಇದ್ದೆವು. ಅಕ್ಟೋಬರ್ ಆದಮೇಲೆ ಬೆಂಗಳೂರಿಗೆ ಅಂಧ್ರ ಅಕ್ಕಿ ಬರುವುದು ನಿಂತು ಹೋಗಿ, ಇಲ್ಲಿ ಅಭಾವ ಬಂತು. ಆವಾಗ ಬೆಂಗಳೂರಿಗೆ ಕೊಡುವುದಕ್ಕೆ ಶುರು ಮಾಡಿದ್ದೇವೆ. ಪಟ್ಟಣ ಗಳಿಗೇ ಕೊಡುತ್ತಿದ್ದೇವೆ, ಹಳ್ಳಿಗಳಿಗೆ ಕೊಡುತ್ತಿಲ್ಲವೆನ್ನುವುದು ನುಳ್ಳು. ಹಳ್ಳಿಗಳಿಗೂ ಕೊಡುತ್ತೇವೆ ಪಟ್ಟಣಗಳಿಗೂ ಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು ಪ್ರದೇಶಗಳಲ್ಲಿ ಹಳ್ಳಿಗಳಲ್ಲ ಕೇವಲ 10ಪರ್ಸೆಂಟ್ ಆಹಾರ ದವಸ ಸ್ಟಾಕ್ ಇದೆ. ಒಂದು ಸೇರು ದವಸ ಕೊಟ್ಟು ಕೂಲಿಗಾರರನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದನ್ನು ಯಾವ ರೀತಿ ನಿವಾರಣೆ ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಪಟ್ಟಣಗಳಿಗೆ ಹಳ್ಳಿಯಿಂದ ಸಾಮಾನ್ಯವಾಗಿ ಆಹಾರ ಬರುತ್ತದೆ. ಪಟ್ಟಣಗಳ ಡಿಮ್ಯಾಂಡನ್ನು ನಾವು ಯಾವಾಗ ಮೀಟ್ ಮಾಡುತ್ತೇವೆಯೊ, ಆವಾಗ ಹಳ್ಳಿ ಗಳಲ್ಲಿರುವ ಆಹಾರ ಅಭಾವ ಹೋಗುತ್ತದೆ, ಏತಕ್ಕಂದರೆ ಪಟ್ಟಣದವರ ಕಣ್ಣು ಅವರ ಮೇಲೆ ಬೀಳುವುದಿಲ್ಲ ; ಅವರಿಂದ ಡ್ರೇನ್ ಮಾಡುವುದಿಲ್ಲ. ಯಾವಾಗ ಪಟ್ಟಣಗಳಿಗೆ ಸಾಕಷ್ಟು ಕೊಟ್ಟುಬಿಡುತ್ತೇವೆಯೋ ಆವಾಗ they do not drain the villages. ಇದರ ಜೊತೆಗೆ ವಿಲೇಜರುಗಳಿಗೂ ಕೊಡುತ್ತೇವೆ. ಎಲ್ಲರಿಗೂ ಕಾರ್ಡು ಕೊಡುವ ಕಾಲ ಬಂದಿಲ್ಲ, ಪಟ್ಟಣದವರಿಗೆ ಕಾರ್ಡು ಕೊಟ್ಟಹಾಗೆ ಹಳ್ಳಿಯವರಿಗೂ ಕಾರ್ಡು ಕೊಡುವ ಕಾಲ ಬಂದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲ ಅಕ್ಕಿ ಸಿಗುವುದಿಲ್ಲವೆಂದು ಏನಾದರೂ ಸರ್ಕಾರಕ್ಕೆ ಮನವಿ ಬಂದಿದೆಯೇ ? ಬಂದಿದ್ದರೆ ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವೂ ಹೇಳಿದ್ದೀರಿ, ಇತರ ಮಾನ್ಯ ಸದಸ್ಯರುಗಳೂ ಹೇಳಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ ಕೇರಳದ ಬಾರ್ಡರಿನಲ್ಲಿರುತ್ತದೆ. ಕೇರಳದಲ್ಲಿ ತೊಂದರೆಯಾದಾಗ ಈ ಜಿಲ್ಲೆ ಯಲ್ಲಿಯೂ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಮಂಗಳೂರಿನಲ್ಲಿ ರೇಶನಿಂಗ್ ಪ್ರಾರಂಭ ಮಾಡಿದ್ದೇವೆ. ಬೆಂಗಳೂರಿನಲ್ಲಿ ಎಷ್ಟು ಕೊಡುತ್ತಿದ್ದೇವೆಯೋ, ಮಂಗಳೂರಿನ ಜನಗಳಿಗೂ ಅಷ್ಟೇ ಕೊಡುತ್ತಿದ್ದೇವೆ. ಸೌತ್ ಕೆನರಾದಲ್ಲಿ ಈಗಾಗಲೆ ಆರುವರೆ ಲಕ್ಷ ಎಕರೆಯಲ್ಲಿ ತರಿಬೆಳೆಯುತ್ತಿದ್ದಾರೆ. ನಾಲ್ಕುವರೆ ಲಕ್ಷ ಎಕರೆಯಲ್ಲಿ ಫಸ್ಟ್ ಕ್ರಾಪ್ ಬರುತ್ತದೆ, ಸೆಕೆಂಡ್ ಕ್ರಾಪ್ ಒಂದೂವರೆ ಲಕ್ಷ ಎಕರೆ ಯಲ್ಲಿ ಬಂದದ್ದನ್ನು ಸ್ವಲ್ಪ ಉಪಯೋಗಿಸುತ್ತಿದ್ದಾರೆ. ನಮಯ ಬಂದಾಗ ಮುಂದೆ ಉಡುಪಿ, ಕುಂದಾಪುರ ಮುಂತಾದ ಕಡೆಗಳಲ್ಲಿಯೂ ರೇಶನಿಂಗ್ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ವಿ. ಗೌಡ.—ಭತ್ತದ ಫಸಲು ಮತ್ತು ರಾಗಿಯ ಬೆಳೆಯೂ ಹೋಗಿರುವುದರಿಂದ, ಅಲ್ಲಿರತಕ್ಕ ರೈತರಿಗೆ, ವ್ಯವಸಾಯಿಗಾರರಿಗೆ ಆಹಾರ ಪದಾರ್ಥ ಸಿಗುತ್ತಾ ಇಲ್ಲ. ಈ ಪರಿಸ್ಥಿತಿಯನು ಹೇಗೆ ತಡೆಗಟ್ಟುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲರಿಗೂ ಕೊಡಬೇಕೆಂದರೆ ನಮಗೂ ಇರಬೇಕಲ್ಲ. ಸಾಧ್ಯವಾದ ಮಟ್ಟಿಗೂ ಕೊಡಬೇಕು ಅನ್ನುವುದೇ ನಮ್ಮ ಆಶೆ. 7-8 ಸರ್ಪಸ್ ಡಿಸ್ಟ್ರಿಕ್ಟುಗಳಿವೆ. ಮೈಸೂರು ಡಿಸ್ಟ್ರಿಕ್ಟು ಸರ್‌ಪ್ಲಸ್ ಡಿಸ್ಟ್ರಿಕ್ಟ್, ಅಲ್ಲಿ ಭತ್ತ ಬೇಕಾದಷ್ಟು ವಸೂಲಾಗಿದೆ. ಮಂಡ್ಯ ಡಿಸ್ಟ್ರಿಕ್ಟು ಒಂದು ಸರ್‌ಪ್ಲಸ್ ಡಿಸ್ಟ್ರಿಕ್ಟು ಎಂದು ನವ ಲೆಕ್ಕದಲ್ಲಿದೆ. ಈ ಸರ್‌ಪ್ಲಸ್ ಡಿಸ್ಟ್ರಿಕ್ಟುಗಳಿಂದ ಮಾತ್ರ ಕೊಂಡು ಕೊಳ್ಳುತ್ತಿದ್ದೇವೆ, ನಾವು ಅಭಾವವಿರುವ ಕಡೆ ಪ್ರೊಕ್ಯೂರ್ ಮಾಡಿಕೊಳ್ಳದೆ ಹೋದರೆ ಅಲ್ಲಾದು ಅಲ್ಲಗೇ ಸಾಕಾಗುತ್ತದೆ. ಅಭಾವ ಸಾಮಾನ್ಯವಾಗಿರುವುದಿಲ್ಲ. ಮುಂದೆ ಅಭಾವ ಪರಿಸ್ಥಿತಿ ಬಂದಾಗ ಹಳ್ಳಿ ಯವರಿಗೂ ಕೊಡುವುದಕ್ಕೆ ಪ್ರೊಕ್ಯೂರ್ ಮಾಡಿ ಇಟ್ಟುಕೊಳ್ಳುತ್ತಿದ್ದೇವೆ.

Sri SANJEEVANATHA AIKALA.—What arrangements are made to provide foodgrains to the floating population especially labour population engaged in huge construction works, such as Harbour work ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರೊಟೆಟಿಂಗ್ ಪಾಪ್ಯುಲೇಶನ್ನನೂ ಮಾನ್ಯ ಸದಸ್ಯರು ಮನಸ್ಸಿ ನಲ್ಲಿಟ್ಟುಕೊಳ್ಳಬೇಕು. 40 ಲಕ್ಷ ಟನ್ ಆಹಾರ ಪದಾರ್ಥ ನಮಗೆ ಬೇಕಾಗುವುದರಲ್ಲಿ 38 ಲಕ್ಷ ಟನ್ನನ್ನು ಫ್ರೀ ಮಾರ್ಕೆಟ್ಟಿನಿಂದ ತೆಗೆದುಕೊಳ್ಳುತ್ತೇವೆ. ಡಿಸ್ಟ್ರಿಕ್ಟ್ ಒಂದೆ ಇರುವುದರಿಂದ, ಅದು 'ವಿತಿನ್ ದಿ ಡಿಸ್ಟ್ರಿಕ್ಟ್ ಮೂವ್' ಆಗುತ್ತದೆ. ನಾವು 2 ಲಕ್ಷ ಟನ್ನನ್ನು ಸರ್‌ಪ್ಲಸ್ ಡಿಸ್ಟ್ರಿಕ್ಟುಗಳಿಂದ ಪ್ರೊಕ್ಯೂರ್ ಮಾಡಿಕೊಳ್ಳುತ್ತೇವೆ. ಹೊರಗಡೆಯಿಂದ ಕೇಂದ್ರ ಸರ್ಕಾರ ಎರಡೂವರೆ ಲಕ್ಷ ಟನ್ ಕೊಡುತ್ತದೆ. ಪಟ್ಟಣದ ಜೊತೆಗೆ ಹಳ್ಳಿಗಳಲ್ಲೂ ಕೂಡ ಅಭಾವ ಪ್ರದೇಶಗಳಿವೆ ; ಅಲ್ಲಿ ಹಂಚುವು ದಕ್ಕೂ ಪ್ರೊಕ್ಯೂರ್ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಟ್ಟಣಕ್ಕೆ ತಾವು ತೋರಿಸುವಂಥ ಔದಾರ್ಯವನ್ನು ಬಡವರಿರುವ ಅಭಾವ ಪ್ರದೇಶಗಳಿಗೂ ತೋರಿಸತಕ್ಕಂಥಾದ್ದು ಸರ್ಕಾರದ ನೀತಿಯಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಟ್ಟಣಕ್ಕೆ ಏನೂ ಅಭಾವ ಬರವಿದ್ದರೆ, ಪಟ್ಟಣಕ್ಕೆ ಸಾಕಷ್ಟು ಕೊಟ್ಟು ಬಿಟ್ಟರೆ, ಹಳ್ಳಿಗಳಲ್ಲಿ ಮುಂದಕ್ಕೆ ಅಭಾವ ಬರುವುದಿಲ್ಲ ; ವಾಸ್ತವವಾಗಿ ಪಟ್ಟಣಗಳಲ್ಲಿ ಅಭಾವವಿದ್ದರೆ, ಅಭಾವ ಪ್ರದೇಶಗಳಿಂದ ಕೊಂಡುಕೊಂಡು ಬರುತ್ತಾರೆ ; ಪಟ್ಟಣಗಳಲ್ಲಿ ಅಭಾವವಿಲ್ಲದಿದ್ದರೆ ಅಭಾವ ಪ್ರದೇಶಗಳಿಂದ ಕೊಂಡುಕೊಂಡು ಬರುವುದು ನಿಂತು, ಆ ಆಹಾರ ಪದಾರ್ಥ ಅಲ್ಲಿಯೇ ಉಳಿದು ಹೋಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಬೆಂಗಳೂರು ಡಿಸ್ಟ್ರಿಕ್ಟ್, ಕೋಲಾರ ಡಿಸ್ಟ್ರಿಕ್ಟ್ ಡಿಫಿಸಿಟ್ ಡಿಸ್ಟ್ರಿಕ್ಟ್ ಗಳು. ಬೆಂಗಳೂರು ಸಿಟಿಗೆ ತಮ್ಮ ಗಮನವನ್ನು ಕೊಟ್ಟಹಾಗೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ವ್ಯವಸಾಯಗಾರರಿಗೆ ಏನು ಪರಿಹಾರ ಕೊಟ್ಟಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳು ಪೂರ್ತಿ ಸರ್‌ಪ್ಲಸ್ ಡಿಸ್ಟ್ರಿಕ್ಟ್‌ಗಳಲ್ಲವೆಂತ ನಮಗೂ ಗೊತ್ತಿದೆ. ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್—ಈ ನಾಲ್ಕೈದು ತಿಂಗಳುಗಳಲ್ಲಿ ಎಲ್ಲರಿಗೂ ಕೊಡುವ ದೃಷ್ಟಿಯಿಂದ ವಸೂಲು ಮಾಡುತ್ತಾ ಇದ್ದೇವೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ.—ನಮ್ಮ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ನೆಲ್ಲು ಬೆಳೆಯುವುದಿಲ್ಲ ಜೋಳ ಒಂದೇ ಬೆಳೆಯುವುದು. ಅಕ್ಕಿ ಸಿಗುವುದಿಲ್ಲ ಸರ್ಕಾರದವರು ಅಕ್ಕಿ ಒದಗಿಸಲು ಏನು ವಿಚಾರ ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಿಜಾಪುರ ಜಿಲ್ಲೆಯಲ್ಲಿ ಬತ್ತ ಬೆಳೆಯುವುದಿಲ್ಲ, ನಿಜ. ಅಲ್ಲಿನ ಜನ ಸಾಮಾನ್ಯವಾಗಿ ಜೋಳ ತಿನ್ನುತ್ತಾರೆ. ಅವರಿಗೆ ಬೇಕಾದಾಗ ಅಕ್ಕಿ ಕೊಡುತ್ತೇವೆ. ಮದುವೆಗಳಿಗೆ ಮತ್ತು ಒಳ್ಳೆಯ ಕಾರ್ಯಗಳಿಗೆ ಅಕ್ಕಿಯನ್ನು ಉಪಯೋಗಿಸುತ್ತಾರೆ. ಅದಕ್ಕೋಸ್ಕರ ಬೇರೆ ಜಿಲ್ಲೆಗಳಿಂದ ಅಲಾಟ್ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಟ್ಟಣಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಆಹಾರ ವ್ಯವಸ್ಥೆ ನ್ಯಾಯವಾಗಿ ಮಾಡುವುದಕ್ಕೆ ಸಾಧ್ಯವಾಗುವಂತೆ ಸರ್ಕಾರ ತನ್ನ ಆಹಾರ ನೀತಿಯನ್ನು ಪುನರ್ಪರಿಶೀಲನೆ ಮಾಡಿ, ನಮ್ಮ ರಾಜ್ಯದಲ್ಲಿ ಎಲ್ಲಿಂದರಾದರೂ ಒಳನಾಡಿನಲ್ಲಿ ತಂದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಮ್ಮ ಮಾತು ಕೇಳಿ ಹೋದ ವರ್ಷ ಕಷ್ಟಕ್ಕೆ ಸಿಕ್ಕಿಬಿಟ್ಟೆವು.

Sri J. P. SARWESH.—May I know the quota of wheat expected to be received by the State in 1965 ?

Sri M. V. KRISHNAPPA.—We have explained a number of times. We have planned to cater to the needs of about 5 million population.

5 ಮಿಲಿಯನ್ ಪಾಪ್ಯುಲೇಶನ್ನಿನಲ್ಲಿ 25 ಲಕ್ಷ ಜನ ಪಟ್ಟಣದವರಿಗೆ, 25 ಲಕ್ಷಜನ ಹಳ್ಳಿ ಲ್ಯಾಂಡೆಲೆಸ್ ಲೇಬರರುಗಳಿಗೆ, 5—6 ತಿಂಗಳಿಗೆ ರೇಶನ್ ಮಾಡಿಕೊಡುವ ಪ್ಲಾನ್ ಹಾಕಿಕೊಂಡಿದ್ದೇವೆ. 50 ಲಕ್ಷ ಜನರಿಗೆ 5—6 ತಿಂಗಳಿಗೆ ಕೊಡಬೇಕಾದರೆ, ನಾಲ್ಕುವರೆ—5 ಲಕ್ಷ ಟನ್ ಬೇಕು. 5 ಲಕ್ಷ ಟನ್ನಿನಲ್ಲಿ, 3 ಲಕ್ಷ ಟನ್ ಆಹಾರವನ್ನು ಕೇಂದ್ರ ಸರಕಾರ ಕೊಡುತ್ತದೆ. ಒಂದುವರೆ ಲಕ್ಷ ಟನ್ ಅಕ್ಕಿ ಆಂಧ್ರದಿಂದ ಬರುತ್ತದೆ. ಒಂದು ಲಕ್ಷ ಟನ್ ಇಂಪೋರ್ಟ್ ಮಾಡಿದೆ ; ಇನ್ನು 2 ಲಕ್ಷ ಟನ್ ನಾವು ಪ್ರೊಕ್ಯೂರ್ ಮಾಡಿದ್ದೇವೆ. ಪ್ಲಾನ್ ಹಾಕಿಕೊಂಡು ಒಂದುವರೆ ಲಕ್ಷ ಟನ್ ಪ್ರೊಕ್ಯೂರ್ ಮಾಡಬಹುದು. ಇನ್ನು ಮಿಕ್ಕದ್ದಕ್ಕೆ ಜೋಳ, ಅಕ್ಕಿ ಹಾಸ್ತಿಯಾಗುವ ಭರವಸೆ ಇದೆ.

Sri L. B. BIRJE.—(*Marathia*).

ಶ್ರೀ ಎಂ. ವಿ. ಕೃಷ್ಣಪ್ಪ.—ಮಿಲ್ಲುಗಳಿಗೆ ಯಾರು ಭತ್ತವನ್ನು ತೆಗೆದುಕೊಂಡು ಹೋಗುತ್ತಾರೊ ಅವರು ತರುವುದರಲ್ಲಿ ಶೇಕಡಾ 50 ರಷ್ಟನ್ನು ಸರ್ಕಾರಕ್ಕೆ ಕೊಡಬೇಕು. ಉಳಿದುದನ್ನು ಅವರು ಮಿಲ್ಲುಗಳಿಗೇ ಬಿಟ್ಟು ಮಾರಬಹುದು ಅಥವಾ ಬೇರೆ ಯಾರಾದರೂ ರೈತರು ತೆಗೆದುಕೊಳ್ಳಬಹುದು. ಹಾಗೆ ಮಿಲ್ಲಿನವರೇ ತೆಗೆದುಕೊಂಡು ಮಾರಬೇಕಾಗಿದ್ದರೆ ಅವರಿಗೂ ಮ್ಯಾಕ್ಸಿಮಂ ಬೆಲೆ ಎಷ್ಟು ಎನ್ನುವುದನ್ನು ನಿಗದಿ ಮಾಡಿರುತ್ತೇವೆ. ಅದರಂತೆ ಮಾರುತ್ತಾರೆ. ಆದರೆ ಮಿಲ್ಲಿನವರು ಬೇರೆ ಕಡೆಗೆ ಕಳುಹಿಸಲು ಅವಕಾಶ ಕೊಡುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿ ಟೌನಿನಲ್ಲಿ ಸುಮಾರು 75 ಸಾವಿರದಷ್ಟು ಜನಸಂಖ್ಯೆ ಇದೆ. ಅಲ್ಲಿರುವ ತಹಶೀಲುದಾರುಗಳು ಹಾಗೂ ನಾವೆಲ್ಲಾ ಸೇರಿಕೊಂಡು ಇಲ್ಲಿನ ಗ್ರಾಮಾಂತರ ಪ್ರದೇಶದವರಿಗೆ ಹಾಗೂ ಇಲ್ಲಿನ ಕಾರ್ಮಿಕರುಗಳಿಗಾಗಿ ದವಸವನ್ನು ಹಂಚಬೇಕೆಂದು ಸುಮಾರು 30,000 ದಷ್ಟು ಟನ್ನುಗಳನ್ನು ತೆಗೆದಿಡಲಾಗಿದೆ. ಈ ರೀತಿ ವಸೂಲು ಮಾಡಲಾಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಬಂದಿದ್ದಾಗಲೂ ಅವರಿಗೆ ತೋರಿಸಲಾಯಿತು. ಇದನ್ನು ತೊಂದರೆಯಾಗದ ರೀತಿಯಲ್ಲಿ ಇಲ್ಲೇ ಹಂಚಬಹುದು, ಬೇರೆ ಯಾವ ಕಾರಣದಿಂದಲೂ ಹೊರಕ್ಕೆ ಇದನ್ನು ಸಾಗಿಸಕೂಡದು ಎಂದು ಮಾಡುತ್ತೀರಾ ಇಲ್ಲವೇ, ಇಲ್ಲಿಂದ ಹೊರಕ್ಕೂ ತೆಗೆದುಕೊಂಡು ಹೋಗುತ್ತೀರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಮಗೆ ಅಷ್ಟೂ ಬೇಕಾಗುವುದಿಲ್ಲ. ಹೆಚ್ಚಾಗಿ ತಿಂದರೆ ಅಜೀರ್ಣವಾಗುತ್ತದೆ, ಬೇರೆ ಕಡೆಗಳಲ್ಲಿ ಜನರು ಕಷ್ಟಪಡುತ್ತಿರುವುದರಿಂದ ಅವರಿಗೂ ಸ್ವಲ್ಪ ಕಳುಹಿಸ ಬೇಕಾಗುತ್ತದೆ.

ಶ್ರೀ ಬಿ. ಎಸ್. ಸೌದಾಗರ್.—ಬೆಳಗಾಂ ಜಿಲ್ಲೆಯಲ್ಲಿ ಅಕ್ಕಿ ಸಿಗುತ್ತಿಲ್ಲ, ಇದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ಹೇಗೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳಗಾಂನ ಮೂರು ನಾಲ್ಕು ತಾಲ್ಲೂಕುಗಳಲ್ಲಿ ಭತ್ತ ಬೆಳೆಯುವುದಿಲ್ಲ. ಅದರಿಂದ ಅಲ್ಲಿ ಅಭಾವ ಇದೆ. ಅದಕ್ಕಾಗಿ ಈಗಾಗಲೇ ಸುಮಾರು ಮೂರು ಸಾವಿರದಿಂದ ಐದು ಸಾವಿರ ಟನ್ನುಗಳಷ್ಟು ಭತ್ತವನ್ನು ವಸೂಲು ಮಾಡಿದ್ದೇವೆ. ಅಲ್ಲಿರುವ ಡೆಪ್ಯೂಟೀ ಕಮಿಷನರವರು ನಿಪ್ಪಾಣಿ ಪ್ರದೇಶದಲ್ಲಿ ಕಾನ್‌ಸ್ಟಿಟ್ಯೂಷನಲ್ ಆಗಿ ಹಂಚುವುದಕ್ಕೆ ಏರ್ಪಾಡು ಮಾಡುತ್ತಾರೆ, ಬೆಳಗಾಂ ಹಾಗೂ ನಿಪ್ಪಾಣಿ ಈ ಭಾಗಗಳಲ್ಲಿ ರೇಷನಿಂಗು ಬರುವುದರಲ್ಲಿದೆ.

ಶ್ರೀ ಎಸ್. ನಂಜೇಗೌಡ.—ಸೊಸೈಟಿಗಳ ಮೂಲಕ ಸರಕಾರದವರು ತರಿಸುವ ಗೋಧಿ ಮತ್ತು ರವೆಯನ್ನು ಹಂಚುವಾಗ ಎರಡು ರೇಟುಗಳಲ್ಲಿ ಕೊಡುತ್ತಾರೆ. ಗೋಧಿ 55 ನಯಾ ಪೈಸಾ ಮತ್ತೊಂದು 90 ನಯಾಪೈಸಾ ಕೆ. ಜಿ. ಗೆ ಎಂತಲೂ ಮತ್ತು ರವೆ ಒಂದು ರೂಪಾಯಿ ಒಂದು ಕೇ. ಜಿ. ಗೆ ಮತ್ತು ಒಂದು ರೂಪಾಯಿ ಇಪ್ಪತ್ತು ನಯಾಪೈಸಾ, ಕೆ. ಜಿ. ಗೆ ಎಂದು ಮಾರಾಟ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇವೆಲ್ಲಾ ಕೇಂದ್ರ ಸರಕಾರದವರು ನಿಖರ ಮಾಡಿರುವ ಬೆಲೆಯಲ್ಲೇ ಮಾರಬೇಕು, ಇದರ ಜೊತೆಗೆ ಹ್ಯಾಂಡ್ಲಿಂಗ್ ಚಾರ್ಜುಗಳು ಮತ್ತು ಕಮಿಷನ್ನು, ಸೇಲ್ಸ್ ಟ್ಯಾಕ್ಸು ಎಲ್ಲವನ್ನೂ ಸೇರಿಸಿಕೊಂಡು ಅವರುಗಳು ಇಲ್ಲಿ ನಿಗದಿ ಮಾಡಿರುತ್ತಾರೆ, ಕಂಟ್ರೋಲ್ ರೇಟಿಗೆ ಮೀರಿ ಯಾವ ಸೊಸೈಟಿಯವರೂ ಕೂಡ ಮಾರುವ ಹಾಗಿಲ್ಲ. ಹಳ್ಳಿಗಳಲ್ಲಿ ಹಂಚಬೇಕೆಂದು ಎಲ್ಲ ಕೋ-ಆಪರೇಟಿವ್ ಸೊಸೈಟಿಗಳಿಗೇ ಹಂಚಿ ಅವರ ಮೂಲಕ ಜನಕ್ಕೆ ಸಿಗುತ್ತಿದೆ. ಹಳ್ಳಿಗಾಡಿನಲ್ಲಿ ಹಂಚುವಾಗ ಯಾವ ವರ್ತಕರುಗಳಿಗೂ ಹಂಚಲು ಅವಕಾಶ ಕೊಟ್ಟಿಲ್ಲ. ಕೇಂದ್ರ ಸರಕಾರದವರು ಹಿಂದೆ 47—48 ನಯಾಪೈಸಾ ಎಂದು ಗೋಧಿಗೆ ನಿಗದಿ ಮಾಡಿದ್ದರೂ, ಆಮೇಲೆ ಇದನ್ನು ಪುನಃ ಐದು ರೂಪಾಯಿಗಳಷ್ಟು ಕೇಂದ್ರದವರು ಜಾಸ್ತಿ ಮಾಡಿದರು, ಅದರಂತೆ ಪುನಃ ಇಲ್ಲೂ ಹೆಚ್ಚು ಮಾಡ ಬೇಕಾಗಿ ಬಂತು ಅಷ್ಟೇ.

ಶ್ರೀ ಸಂಜೀವನಾಥ ಐಕಳ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಅಭಾವ ಹೆಚ್ಚಾಗಿರುವುದರಿಂದ ಅಲ್ಲಿನ ಜನರು ಉಪವಾಸ ಬಿದ್ದು ಪಟ ಪಟ ಸಾಯುತ್ತಿದ್ದಾರೆ. ಶಿವಮೊಗ್ಗಾ ಜಿಲ್ಲೆ ಸರ್‌ಪ್ಲಸ್ ಜಿಲ್ಲೆಯಾಗಿರುವುದರಿಂದ ಅಲ್ಲಿ ಬೇಕಾದಷ್ಟು ಭತ್ತ ಇರುವುದನ್ನು ನಮ್ಮ ಜಿಲ್ಲೆಗೇಕೆ ಕಳುಹಿಸಿಕೊಟ್ಟು ಇಲ್ಲಿನ ಜನರ ತೊಂದರೆಗಳನ್ನು ಕಡಿಮೆ ಮಾಡಬಾರದು ? ಶಿವಮೊಗ್ಗಾ ಜಿಲ್ಲೆಗಾಗಿ ಶೇಕಡಾ 50 ರಷ್ಟು ಇಟ್ಟುಕೊಂಡು ಉಳಿದ ಐವತ್ತು ಪರ್ಸೆಂಟ್‌ನಷ್ಟು ಭತ್ತವನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಕಳುಹಿಸಲು ಇರುವ ಅಭ್ಯಂತರವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಇಲ್ಲಿ ಹೇಳಿದಂತೆ ಯಾರೂ ಅಲ್ಲಿ ಪಟ ಪಟ ಎಂದು ಸಾಯುತ್ತಿಲ್ಲ. ಸುಮ್ಮನೆ ಹುಲಿ ಬಂತು, ಹುಲಿ ಬಂತು ಎಂದು ಹೇಳುವ ಹಾಗೆ ತಾವು ಇಲ್ಲ ಹೇಳುತ್ತೀರಿ. ಅದರೆ ಅಲ್ಲ ನ್ಯಾಯವಾದ ಹುಲಿ ಬಂದಾಗ ಯಾರೂ ನಿಮ್ಮ ಸಹಾಯಕ್ಕೆ ಬರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇದೆ ಅದಕ್ಕಾಗಿ ಆ ಜಿಲ್ಲೆಯನ್ನು ಒಂದು ಸ್ಪೆಷಲ್ ಫುಟಿಂಗ್ ಮೇಲೆ ತೆಗೆದುಕೊಳ್ಳಬೇಕೆಂದು ಮೈಸೂರು ಹಾಗೂ ಶಿವಮೊಗ್ಗಾ ಜಿಲ್ಲೆಗಳಲ್ಲ ಭತ್ತವನ್ನು ವಸೂಲು ಮಾಡಲಾಗುತ್ತಿದೆ. ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಬಾರ್ಡರಿನಲ್ಲಿ ಕೇರಳ ಪ್ರಾಂತ ಬರುತ್ತದೆ, ಅಲ್ಲಿನ ಒಂದು ಸ್ಮೆಕರಾಜಿಕಲ್ ಎಫೆಕ್ಟ್‌ಗಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಒಂದು ಸ್ಪೆಷಲ್ ಜಿಲ್ಲೆಯಂತೆ ಮಾಡಿಕೊಂಡರು. ಅಲ್ಲಿ ರೇಷನಿಂಗ್ ಜಾರಿಗೆ ತರಬೇಕೆಂದಿದ್ದೇವೆ. ಈಗ ಮಂಗಳೂರು ಜಿಲ್ಲೆಯಲ್ಲಿ ರೇಷನಿಂಗ್ ಷುರು ಮಾಡಲಾಗಿದೆ, ಬೇರೆ ಟೌನುಗಳಲ್ಲಿಯೂ ಇನ್ನೊಂದೆರಡು ತಿಂಗಳಲ್ಲಿ ರೇಷನಿಂಗ್ ಜಾರಿಗೆ ಕೊಡುವುದರಲ್ಲಿದ್ದೇವೆ ಮತ್ತು ಏರ್ಪಾಡು ಮಾಡುತ್ತೇವೆ.

Sri N. O. SAMAJI.—(*Marathi*)

ಶ್ರೀ ಎಂ. ವಿ. ಕೃಷ್ಣಪ್ಪ.—ಹೆಜ್ಜು ಲೆವಿ ತೆಗೆದುಕೊಂಡು ಅದರಂತೆ ಸೊಸೈಟಿಗಳವರು ಭತ್ತವನ್ನು ವಸೂಲು ಮಾಡಿದ್ದರೆ ಅದನ್ನು ಆ ಜಿಲ್ಲೆಯ ರಿಕ್ವೈರುಮೆಂಟು ನೋಡಿಕೊಂಡು ಆ ಜಿಲ್ಲೆಗೆ ಹಂಚಿ ಉಳಿದುದನ್ನು ಬೇರೆ ಜಿಲ್ಲೆಗೆ ಹಂಚಬೇಕಾಗುತ್ತದೆ. ಅದೇ ಜಿಲ್ಲೆಗೆ ಅದನ್ನು ಇಡುವುದಕ್ಕೆ ಸಾಧ್ಯವಿಲ್ಲ ಕೆಲವು ಜಿಲ್ಲೆಗಳಲ್ಲಿ ಜಾಸ್ತಿ ಬೆಳೆ ಬರುತ್ತದೆ. ಅದನ್ನು ತೆಗೆದುಕೊಂಡು ಕಡಿಮೆ ಬೆಳೆ ಇರುವ ಜಿಲ್ಲೆಗಳಿಗೆ ಹಂಚಬೇಕಾಗಿ ಬರುತ್ತದೆ, ಒಂದೇ ಸಂಸ್ಥಾನದಲ್ಲಿ ಒಂದೇ ಜಿಲ್ಲೆಗೆ ಹಂಚುವುದು ಎಂದರೆ ಅದು ಸರಿಯಿಲ್ಲ. ಎಲ್ಲ ಜಿಲ್ಲೆಗಳಿಗೂ ನೋಡಿಕೊಂಡು ಸರಿಯಾದ ರೀತಿಯಲ್ಲಿ ಹಂಚಬೇಕಾಗಿ ಬರುತ್ತದೆ.

ಶ್ರೀ ಗೋಪಾಲ ನಾರೆನ್ನ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನಲ್ಲಿ ಅಕ್ಕಿಯ ಅಭಾವ ಎದೆ, ಕೇರಳದ ಬಾರ್ಡರು ಸಮೀಪವಾಗಿರುವುದರಿಂದ ಹೀಗಾಗಿದೆ ಎಂದು ಹೇಳಿದರು. ಕೊಡಗು ಕೂಡ ಸಮೀಪವಾದ ಬಾರ್ಡರು ಆಗಿದೆ, ಆ ಕಡೆಗೂ ಹೋಗುತ್ತದೆ. ಈ ಪರಿಸ್ಥಿತಿಯಲ್ಲಿ ಒಂದೊಂದು ಮನೆಗೆ ಒಂದು ಕೆ. ಜಿ. ಎಂದು ಕೊಡುತ್ತಿದ್ದರು. ಆಮೇಲೆ ಅದನ್ನು ಅರ್ಧ ಕೆ. ಜಿ. ಎಂದು ಮಾಡಿದರು. ಇದರಿಂದ ಹೊರಗಡೆ ಬ್ಲಾಕು ಮಾರ್ಕೆಟ್ಟು ರೇಟಿನಲ್ಲಿ ಸಿಗುವಂತೆ ಇಲ್ಲನ ಆಡಳಿತ ಮಾಡುವವರೇ ಒಂದು ಕೆ. ಜಿ. ಗೆ. ಒಂದು ರೂಪಾಯಿನಿಂದ ಒಂದು ರೂಪಾಯಿ ಇಪ್ಪತ್ತು ನಯಾ ಪೈಸಾಗಳಲ್ಲಿ ತೆಗೆದುಕೊಳ್ಳಬೇಕೆಂದರೆ ಜನಕ್ಕೆ ಬಹಳ ಕಷ್ಟವಾಗುತ್ತದೆ. ಇದನ್ನೆಲ್ಲಾ ಸರಕಾರ ಸರಿಪಡಿಸಲು ಇರುವ ಅಡ್ಡಿ ಆತಂಕಗಳಾದರೂ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಒಂದೊಂದು ಸಲ ಬಹಳ ಉತ್ಪ್ರೇಕ್ಷೆ ಮಾಡಿ ಇಲ್ಲಿ ಬಂದು ಹೇಳುತ್ತೀರಿ. ಕೆಲವು ವೇಳೆಗಳಲ್ಲಿ ರೇಟು ಕೂಡ ಒಂದು ರೂಪಾಯಿನಿಂದ 1—20 ನಯಾ ಪೈಸಾ ದಷ್ಟು ಏರಿರುತ್ತದೆ. ಅದೂ ಅಲ್ಲದೆ ಈಗ ರೇಷನ್ ಕಾರ್ಡುಗಳನ್ನು ಕೊಟ್ಟು ರೇಷನಿಂಗ್‌ನ್ನು ಜಾರಿಗೆ ತರಬೇಕೆಂದು ಇದ್ದೇವೆ. ಮಂಗಳೂರಿನಲ್ಲಿ ಐದು ಜನ ಇರುವ ಒಂದು ಕುಟುಂಬದಲ್ಲಿ ಒಬ್ಬರು ಮಕ್ಕಳೂ ಹೆಚ್ಚಾಗಿದ್ದರೆ ಅವರಿಗೂ ಒಂದು ಕೆ. ಜಿ. ಅಕ್ಕಿ ಕೊಡಬೇಕೆಂದು ಒಟ್ಟು ಒಂದು ಮನೆಗೆ 6 ಕೆ. ಜಿ. ಅಕ್ಕಿ ಎಂದು ಕೊಡಲು ಏರ್ಪಾಡು ಮಾಡಲಾಗಿದೆ. ಇದೂ ಅಲ್ಲದೆ ಬೇರೆ ಕಡೆ ಜನರು ಕೊಂಡುಕೊಳ್ಳಲು ಫ್ರೀ ಮಾರ್ಕೆಟ್ಟು ಕೂಡ ಇದೆ. ಓಪನ್ ಮಾರ್ಕೆಟ್ಟಿನಲ್ಲಿ ಮಂಗಳೂರಿನಲ್ಲಿರುವವರು ಭತ್ತ ಬೆಳೆಯದೇ ಇರುವವರು ಕೊಂಡುಕೊಳ್ಳಬಹುದು. ಯಾರೂ ತೆಗೆದುಕೊಳ್ಳ ಕೂಡದು ಎಂದು ಬ್ಯಾನ್ ಮಾಡಿಲ್ಲ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗಲು ಮಾತ್ರ ಬ್ಯಾನ್ ಇದೆ.

ಶ್ರೀ ಜಿ. ಡಿ. ದೇವೇಂದ್ರಪ್ಪ.—ಭದ್ರಾವತಿಯಲ್ಲಿರುವ ಕಾರ್ಮಿಕರಿಗಾಗಿ ತೆಗೆದು ಶೇಖರಿಸಿಟ್ಟಿರುವ ದವಸವನ್ನು ಬೇರೆ ಕಡೆಗೆ ತೆಗೆದುಕೊಂಡು ಸರ್ಕಾರದವರು ಹೋಗುತ್ತಾರೆ ಎನ್ನುವ ಗಾಬರಿ ಜನರಿಲ್ಲದೆ, ಅದುದರಿಂದ ಇಲ್ಲನ ಕಾರ್ಮಿಕರಿಗಾಗುವಷ್ಟನ್ನು ಇಲ್ಲಯೇ ಬಿಡುತ್ತೀರೋ ಇಲ್ಲವೇ ಏನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿಯಲ್ಲಿ ಸುಮಾರು 85 ಸಾವಿರ ಜನರು ಇದ್ದಾರೆ, ಶಿವಮೊಗ್ಗಾದಲ್ಲಿ ಸುಮಾರು 50 ಸಾವಿರದಷ್ಟು ಇದ್ದಾರೆ. ದೇಶದಲ್ಲಿ ಈಗ ರೇಷನಿಂಗು ಜಾರಿಗೆ ಬಂದಿರುವಾಗ ಒಂದು ಕಡೆಯಿಂದ ತೆಗೆದುಕೊಂಡುಹೋಗಿ ಇನ್ನೊಂದು ಕಡೆಗೆ ಧಾನ್ಯ ಸರಿಯಾಗಿ ಹಂಚಬೇಕಾಗುತ್ತದೆ. ಆದುದರಿಂದ ಭದ್ರಾವತಿಯಲ್ಲಿ ಹೆಚ್ಚಾಗಿದ್ದರೆ ಅದನ್ನು ಬೇರೆ ಜಿಲ್ಲೆಗಳಿಗೆ ಹಂಚಬೇಕಾಗುತ್ತದೆ, ಒಂದೇ ಜಿಲ್ಲೆಗೆ ಹಂಚಬೇಕು ಎನ್ನುವ ತತ್ವವನ್ನು ಒಪ್ಪುವುದಕ್ಕಾಗುವುದಿಲ್ಲ. ಜನಗಳಿಗೆ ಸರಿಯಾಗಿ ಹಂಚುವಾಗ ಹೊರಗಿನಿಂದಲೂ ತರಲೇ ಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ದವನಗಳ ಅಭಾವಕ್ಕೆ ಕಾರಣ ಮಿಲ್ಲುಗಳಿಗೆ ಭತ್ತ ತರುವವರು ಶೇಕಡಾ 50 ರಷ್ಟನ್ನು ಕೊಡಬೇಕೆಂದು ಮಾಡಿರುವುದಂದ ಆಗಿದೆ. ಅಲ್ಲದೆ ಅಲ್ಲ ಹ್ಯಾಂಡು ಪೌಂಡು ಅಕ್ಕಿ ಮಾಡುವ ಉದ್ಯಮವೂ ಇದೆ. ಮನೆಗಳಲ್ಲಿಯೇ ಭತ್ತವನ್ನು ಕುಟ್ಟಿ ಮಾಡಿಕೊಳ್ಳುವವರೂ ಹೆಚ್ಚಾಗಿದ್ದಾರೆ, ಹೀಗೆ ಹ್ಯಾಂಡು ಪೌಂಡು ಮಾಡುತ್ತಿರುವುದರಿಂದಾಗಿ ಇಲ್ಲದ್ದ ಸುಮಾರು 165 ರೈಸ್ ಮಿಲ್ಲುಗಳು ಕ್ಲೋಸು ಆಗಿವೆ, ಈಗ ಅಲ್ಲಿ ಅಕ್ಕಿಯ ಅಭಾವವಿರುವ ಕಾರಣ ಇಂತಹ ಕ್ಲೋಸಾಗಿರುವ ಮಿಲ್ಲುಗಳನ್ನು ಪುನಃ ತೆಗೆಯಲು ಏರ್ಪಾಡು ಮಾಡುತ್ತೀರಾ ? ಅಥವಾ ಬೇರೆ ಇನ್ನಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ, ಹೇಗೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೌತ್ ಕನರ ಜಿಲ್ಲೆಯನ್ನು ಇಗ್ನೋರು ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರೇ ಹೇಳಿದ ಹಾಗೆ ಅಲ್ಲಿ ಹ್ಯಾಂಡು ಪೌಂಡು ರೈಸು ಇಂಡಸ್ಟ್ರಿ ಇದೆ. ಆದರಿಂದ ಜನಕ್ಕೇನೂ ತೊಂದರೆಯಾಗಿಲ್ಲ, ಅಲ್ಲಿರುವ ಮಿಲ್ಲುಗಳನ್ನು ತೆಗೆಯಬೇಡಿ ಎಂದು ನಾವು ಹೇಳಿಲ್ಲ. ನೀವು ಹೇಳಬಹುದು. ಮಾರ್ಕೆಟ್ಟಿನಲ್ಲಿ ಬೇಕಾದಷ್ಟು ಅಕ್ಕಿ ಬರುತ್ತಿದೆ ಅದನ್ನು ತೆಗೆದು ಕೊಳ್ಳಲು ಯಾರೂ ಅಡ್ಡಿ ಮಾಡುತ್ತಿಲ್ಲ, ನಿಮಗೋಸ್ಕರವಾಗಿಯೇ ಶಿವಮೊಗ್ಗಾ ಹಾಗೂ ಇನ್ನು ಒಂದೆರಡು ಜಿಲ್ಲೆಗಳಲ್ಲಿ ಅಕ್ಕಿಯನ್ನು ಶೇಖರಣೆ ಮಾಡುತ್ತಿದ್ದೇವೆ, ಅಲ್ಲಿನ ಜನ ಸ್ವಲ್ಪ ಸಹಿಸಿ

ಕೊಂಡು ಇದ್ದರೆ ನಾವು ಸರಿಯಾಗಿ ಅಲ್ಲಿಗೆ ಅಕ್ಕಿ ಹಂಚಲು ಆಗುತ್ತದೆ, ಅಲ್ಲಿನ ಜನರ ಕಷ್ಟವೇನು ಎನ್ನುವುದು ನಮಗೂ ಗೊತ್ತಿದೆ. ಸ್ವಲ್ಪ ತೊಂದರೆ ಇದೆ. ಆಗಲೇ ಹೇಳಿದ ಹಾಗೆ ಮಂಗಳೂರಿನಲ್ಲಿ ರೇಷನಿಂಗ್ ತಂದಿದ್ದೇವೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ಸರಿಯಾದ ಏರ್ಪಾಡನ್ನು ಮಾಡಲಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಭತ್ತವನ್ನು ಮಿಲ್ ಮಾಡಲು ತರುವಾಗ ಶೇಕಡಾ ಐವತ್ತ ರಷ್ಟನ್ನು ಮಿಲ್ಲಿಗೇ ಕೊಡಬೇಕೆಂದು ಮಾಡಿದ್ದೀರಿ. ಕೆಲವು ಕಡೆಗಳಲ್ಲಿ ಹಲ್ಲರುಗಳಿಗೆ ಭತ್ತ ತಂದಾಗ ಶೇಕಡಾ ಐವತ್ತರಷ್ಟು ಭತ್ತ ಕೊಡಬೇಕೆಂದು ಹೇಳುತ್ತಾರೆ. ಅದನ್ನು ತಪ್ಪಿಸಲು ಸಾಧ್ಯವಾಗುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಿಲ್ಲುಗಳಲ್ಲಿ ಮಾತ್ರ ಶೇಕಡ 50 ರಷ್ಟು ಕೊಡಬೇಕಾಗಿ ಬರುತ್ತದೆ.

ಶ್ರೀ ನಂಜೀವನಾಥ ಐಕಲ.—ತಾವು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಎಲ್ಲ ವಿಚಾರಗಳೂ ತಿಳಿದಿವೆ ಎಂದು ಹೇಳಿದಿರಿ. ನಮ್ಮಲ್ಲಿರುವ ಜನತೆಯ ಅಕ್ಕಿ ತೊಂದರೆಗಾಗಿ ಇಂಟರು ಡಿಸ್ಟ್ರಿಕ್ಟು ಮೂವ್ ಮಂಟಗೆ ಅವಕಾಶಮಾಡಿಕೊಡುವುದಕ್ಕಾಗುವುದಿಲ್ಲವೇ ? ಉದಾಹರಣೆಯಾಗಿ ಹೇಳುವುದಾದರೆ ಮೈಸೂರು ಜಿಲ್ಲೆಯಲ್ಲಿ ಕೆಲವು ಕಡೆಗಳಿಂದ, ಹಾಸನ ಜಿಲ್ಲೆಯ ಮೂಲಕ ದವನಗಳನ್ನು ತರಿಸಿ ಕೊಳ್ಳುವಂತೆ ಮಾಡಿದರೆ ಇಲ್ಲಿನ ಜನತೆಗೆ ಅನುಕೂಲಮಾಡಿಕೊಡಬಹುದಲ್ಲವೇ ?

1-30 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಸೌತ್ ಕೆನರ ಡಿಸ್ಟ್ರಿಕ್ಟ್‌ನಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಳೆ ಬರುತ್ತದೆ. ಕೂರ್ಗ್, ಶಿವಮೊಗ್ಗಾ, ಮೈಸೂರಿಗೆ 3,000 ಕ್ವಿಂಟಾಲ್ ಅಕ್ಕಿ ಅಲಾಟ್ ಮಾಡಿದ್ದೇವೆ. ಈಗ 10 ಸಾವಿರ ಕ್ವಿಂಟಾಲ್ ಅಕ್ಕಿ ಕಳಿಸಿದ್ದೇವೆ. ಇನ್ನೂ ಹತ್ತು ಸಾವಿರ ಕ್ವಿಂಟಾಲ್ ಕಳಿಸಲು ಪ್ರೊಕ್ಯೂರ್ ಮಾಡುತ್ತಿದ್ದೇವೆ. ಬೇರೆ ಜಿಲ್ಲೆಯವರಿಗೆ ಕೊಟ್ಟುಬಿಟ್ಟು ನಿಮ್ಮ ಜಿಲ್ಲೆಯವರನ್ನು ಉಪವಾಸ ಇಡುತ್ತೇವೆ ಎಂದು ತಿಳಿದುಕೊಳ್ಳಬೇಡಿ.

ಶ್ರೀಮತಿ ಬಿ. ಎರ್. ನುಬ್ಬಮ್ಮ.—ಗ್ರಾಮಾಂತರ ಪ್ರದೇಶದಲ್ಲಿ ಆಹಾರ ಪದಾರ್ಥ ಪಡೆಯಲು ಕಷ್ಟವಾಗಿದೆ. ನಗರದಲ್ಲಿ ಕೊಡ ಕೂಲಿಕಾರರಿಗೆ ಆಹಾರ ಪಡೆಯುವುದಕ್ಕೆ ಕಷ್ಟವಾಗಿರುತ್ತದೆ. ಆದುದರಿಂದ ರೇಬರರ್ಸ್ ವಿಷಯದಲ್ಲಿ ಯಾವ ನೀತಿ ಅನುಸರಿಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೂ ಕೂಡ ಕೊಡುತ್ತೇವೆ.

ಶ್ರೀ ಎಂ. ವಿ. ದೇವ್.—ನಮ್ಮ ತಾಲ್ಲೂಕಿನಲ್ಲಿ ರಾಗಿ ತಿನ್ನತಕ್ಕ ಜನ ಹೆಚ್ಚಾಗಿದ್ದಾರೆ. ರಾಗಿಯ ಜೊತೆಗೆ ಗೋಧಿ ಉಪಯೋಗಿಸಲು ಆಗಿಂದಾಗ್ಗೆ ಗೋಧಿ ಒದಗಿಸಲು ಸಾಧ್ಯವಾಗುತ್ತದೆಯೇ ?

ಶ್ರೀ ವಿ. ಎಂ. ಕೃಷ್ಣಪ್ಪ.—ಅದು ನಿಜ. ನಾಲ್ಕೈದು ಜಿಲ್ಲೆಗಳಲ್ಲಿ ರಾಗಿ ಬೆಳೆ ಕೆಟ್ಟು ಹೋಯಿತು. ನಾಲ್ಕೈದು ಆಣೆ ಆವರೇಜ್ ರಾಗಿ ಬೆಳೆ ಬಂದಿದೆ. ಈ ನಾಲ್ಕೈದು ಜಿಲ್ಲೆಗಳಿಗೆ ರಾಗಿಯ ಜೊತೆಗೆ ಗೋಧಿ ಉಪಯೋಗಿಸಲು ಗೋಧಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ವರ್ಷ ನಮಗೆ ದೊರೆಯಬೇಕಾದ ಗೋಧಿ ಕೋಟಾ ಕಟ್ ಮಾಡಿದ್ದರು. ಮುಂದಿನ ತಿಂಗಳಿನಿಂದ ರಿಸ್ಟೋರ್ ಮಾಡುತ್ತಾರೆ. ಗೋಧಿ ತರತಕ್ಕ ಸ್ಟೀಮರ್‌ಗಳು ನಮ್ಮ ದೇಶದ ಕಡೆಗೆ ಹೊರಟಿವೆ. ಅವು ಮಾರ್ಗದಲ್ಲಿವೆ. ರಾಗಿಯ ಜೊತೆಗೆ ಗೋಧಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ರೈತನಿಗೆ ಅನುಕೂಲ ಮಾಡಿಕೊಡುವುದಕ್ಕೆ ಯಾವಾಗ ಯೋಜನೆ ಮಾಡುತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಲೇ ಯೋಜನೆ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗಾ ಜಿಲ್ಲೆಯಲ್ಲಿ ಜನ್ನಾಗಿ ಆಹಾರ ಧಾನ್ಯ ಪ್ರೊಕ್ಯೂರ್ ಆಗುತ್ತಾ ಇದೆ ಎಂದು ಹೇಳಿದಿರಿ. ಶಿವಮೊಗ್ಗಾ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಲ್ಲಿ ಅದರಲ್ಲಿಯೂ ಹೆಚ್ಚಾಗಿ ಭದ್ರಾವತಿ ತಾಲ್ಲೂಕಿನಲ್ಲಿ ರೈತರು ಗಾಡಿಗಳಲ್ಲಿ ಭತ್ತ ತುಂಬಿಕೊಂಡು ದಾರಿಯಲ್ಲಿ ಮೆರವಣಿಗೆಯಿಂದ ಬಂದು ಭತ್ತ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿ ತಾಲ್ಲೂಕಿನಲ್ಲಿ ಹಳ್ಳಿಗಳಿಂದ ಮೆರವಣಿಗೆಯಲ್ಲಿ ಬಂದಿದ್ದರು. ಐದಾರು ನೂರು ಗಾಡಿಗಳು ಕಳೆದ ಭಾನುವಾರ ತಂದಿದ್ದರು. ಹಿಂದಿನ ಭಾನುವಾರ ಈ ಮೆರವಣಿಗೆಯ ಮುಂದೆ ಮಾನ್ಯ ಸದಸ್ಯರು ಇದ್ದುಕೊಂಡು ಜನರಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಬರುವ ಭಾನುವಾರ ನಹ ತಾವು ಭದ್ರಾವತಿಗೆ ಹೋಗಿ ಪ್ರೊಸೆಶನ್ ಲೀಡ್ ಮಾಡಬೇಕು ಎಂದು ಹೇಳುತ್ತೇನೆ.

Mr SPEAKER.—There was some reference that Sri T.D. Devendrapp. was leading the procession. Is it the same thing repeated again ? How many time is it repeated on the Floor of the House ?

(*Laughter*)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಭತ್ತವನ್ನು ಮಿಲ್ಲಗೆ ತೆಗೆದುಕೊಂಡು ಹೋದರೆ ಶೇಕಡ 50 ರಷ್ಟು ಕೊಡಬೇಕಾಗುತ್ತದೆ ಎಂದು ಜನರು ಭತ್ತ ಹಲ್ಲರಿಗೆ ತೆಗೆದುಕೊಂಡು ಹೋಗಿ ಅಕ್ಕಿ ಮಾಡಿಸುವದು ಪ್ರಾರಂಭವಾಯಿತು. ಈಗ ಹಲ್ಲರ ಮೇಲೆ ಸಹ ಶೇಕಡ 50 ರಷ್ಟು ಭತ್ತ ಕೊಡತಕ್ಕದ್ದು ಎಂದು ನಿರ್ಬಂಧ ಜಾರಿ ಮಾಡಿದ ಮೇಲೆ ರೈತರಿಗೆ ತೊಂದರೆಯಾಗಿದೆ. ಈ ತೊಂದರೆ ತಪ್ಪಿಸುವುದಕ್ಕೆ ನಿರ್ಬಂಧ ತೆಗೆದುಹಾಕುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮಗೆ ಇದು ಗೊತ್ತಿದೆ. ಮೊದಲು ಶೆಲ್ಲರ್ಸ್ ಮೇಲೆ ಇದನ್ನು ಜಾರಿ ಮಾಡಿ ಶೇಕಡ 50 ರಷ್ಟು ಅಕ್ಕಿ ಭತ್ತ ಕೊಡಬೇಕೆಂದು ಇದ್ದಿತು. ಆಗ್ಗೆ ಹಲ್ಲರ್ಸ್ ಬಿಟ್ಟು ಬಿಟ್ಟಿದ್ದೆವು. ನಮ್ಮ ರಾಜ್ಯದಲ್ಲ 4,000 ಗಿರಣಿಗಳಲ್ಲ 600 ಶೆಲ್ಲರ್ಸ್ ಇವೆ, 3,400 ಹಲ್ಲರ್ಸ್ ಇವೆ. ಶೆಲ್ಲರ್ಸ್ ಮೇಲೆ ನಿರ್ಬಂಧ ಜಾರಿ ಮಾಡಿದ್ದು ಅನುಕೂಲ ಎಂದು ಹಾಗೆ ಮಾಡಿತ್ತು. ಆದರೆ ಜನರು ಎಲ್ಲರೂ ಶೆಲ್ಲರ್ಸಿಗೆ ಹೋಗದೆ ಹಲ್ಲರ್ಸಿಗೆ ಹೋಗುವುದು ಪ್ರಾರಂಭಿಸಿದಮೇಲೆ ಹಲ್ಲರ್ಸಿಗೆ ಕೂಡ ಇದನ್ನು ಜಾರಿ ಮಾಡಲಾಯಿತು. ಇದೆಲ್ಲವೂ ಬಡವರ ಅನುಕೂಲತೆಗಾಗಿ ಮಾಡಲಾಗಿದೆ. ಆದುದರಿಂದ ಇನ್ನು ಎರಡು ತಿಂಗಳು ಬಡವರು ಕಷ್ಟಪಟ್ಟರೆ ಮೂರನೇ ತಿಂಗಳು ಎಲ್ಲಾ ಸರಿಹೋಗುತ್ತದೆ.

Sri SANJEEVANATH AIKALA.—Is it not a fact that Hand-pounding Co-operative Societies run by the Khadi and Village Industries Board of Mysore and the All-India Khadi and Village Industries Commission are experiencing great difficulties on account of this ban on food-grains to get Paddy for hulling in their Societies and whether any such Society has sent any representation to Government ?

Sri M. V. KRISHNAPPA.—It is a fact that Hand pounding industry had to suffer because they could not purchase paddy at controlled price. We have allotted 5,000 quintals of paddy to the Khadi Board and they have distributed to other Societies in turn.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇಂದಿನ ಆಹಾರ ಪರಿಸ್ಥಿತಿಯ ಮೂಲಕ ಅಗ್ರಿಕಲ್ಚರಲ್ ಲೇಬರರ್ಸ್‌ಗಳಿಗೆ ಬಹಳ ತೊಂದರೆಯಾಗಿದೆ. ಹಿಂದಕ್ಕೆ ರಾಗಿಯ ಬೆಲೆ ಕಡಿಮೆ ಇತ್ತು. ಈಗ ಒಂದು ಪಲ್ಲಾಕ್ಕೆ 70 ರೂ. ಬೇಳುತ್ತದೆ. ಕೂಲಿಕಾರನು ತನಗೆ ದೊರೆಯುವ 12 ಆಣೆ ಕೂಲಿಯಲ್ಲಿ ಜೀವನ ಮಾಡುವುದು ಹೇಗೆ ? ಇದನ್ನು ಹೇಗೆ ಬಗಹರಿಸುತ್ತೀರಿ ? ಅವರಿಗೆ ಕೂಲಿ ಹಣ ಕೊಡುವುದರ ಬದಲು ಸಬ್‌ಸಿಡೈಜ್ಡ್ ರೇಟಿನಲ್ಲಿ ಆಹಾರ ಧಾನ್ಯ ವ್ಯವಸಾಯ ಕೂಲಿಕಾರರಿಗೆ ಒದಗಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

Mr. SPEAKER.—The point is, can the Government supply food instead of cash wages ?

Sri M. V. KRISHNAPPA.—The Government cannot do it. The present-day practice in the villages is, the farmers are refusing to come for work on cash wages ; they are asking for wages in kind.

Students passed out from the Polytechnic Institutes in the State.

**Q.*—336. Sri GANJI VEERAPPA (Harihar).—

Will the Government be pleased to state:—

(*a*) the number of students who have passed out from the Polytechnic Institutes in the State in the years 1962-63, 1963-64 in Civil, Mechanical and Electrical Diploma Sections ;